12

# “ಮರಣದವರೆಗೆ ನಂಬಿಗಸ್ಥನಾಗಿರು”

ನಮ್ಮ ಹೆಚ್ಚಾದ ಅಧ್ಯಯನವು ತೀರ್ಮಾನಗಳನ್ನು ಮಾಡುವದರಲ್ಲಿತ್ತು: ಯೇಸುವಿನಲ್ಲಿ ನಂಬುವ ತೀರ್ಮಾನ, ಕ್ರೈಸ್ತನಾಗುವ ತೀರ್ಮಾನ, ಎಲ್ಲಿ ಕೆಲಸ ಮಾಡಬೇಕು ಮತ್ತು ಆರಾಧಿಸಬೇಕು ಎಂಬುದನ್ನು ಕುರಿತು ತೀರ್ಮಾನ. ಅಂಥ ತೀರ್ಮಾನಗಳು ಮಾಡಲ್ಪಟ್ಟನಂತರ ಕಠಿಣವಾದ ಕಾರ್ಯ ಬರುತ್ತದೆ: ಅನುದಿನವು ಕ್ರೈಸ್ತ ಜೀವಿತ ಜೀವಿಸುವುದು.

ನಮ್ಮ ಈ ಅಧ್ಯಯನದಲ್ಲಿ ಮಾತ್ರವೇ ಈ ಆಹ್ವಾನವನ್ನು ವಿಚಾರಿಸುತ್ತೇವೆ. ಹೊಸ ಒಡಂಬಡಿಕೆಯ ಹೆಚ್ಚಾದ ಭಾಗವು ಕ್ರೈಸ್ತನು ಹೇಗೆ ಜೀವಿಸಬೇಕು ಎಂಬುದರ ಬಗೆಗಿದೆ. ಕ್ರೈಸ್ತನು ತಾನು ಹೇಗೆ ಯೇಸುವಿನ ಹಿಂಬಾಲಕನಾಗಿರ ಬೇಕೆಂಬುದನ್ನು ಕಲಿಯುವದರಲ್ಲಿ ಇಡೀ ಜೀವನ ಕಳೆಯುತ್ತಾನೆ.

## ಸವಾಲು

ಬೈಬಲ್ ಬಗ್ಗೆ ಹೆಚ್ಚು ತಿಳಿಯದವರೂ ಸಹ ಕ್ರೈಸ್ತನು ತನ್ನ ಸುತ್ತಲಿರುವವರಿಗಿಂತ ಹೆಚ್ಚಾಗಿ ಭಕ್ತಿಯ ಜೀವನ ನಡಿಸಬೇಕಾಗಿರುವುದನ್ನು ತಿಳಿದಿರುವನು. “ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕ ಭಾವದವರಾಗಿರಿ” (ರೋಮಾಪುರ 12:2ಎ) ಎಂದು ಪೌಲನು ಹೇಳಿದ್ದಾನೆ. ಯೇಸುವು ಆಹ್ವಾನವನ್ನು ಈ ಮಾತುಗಳಲ್ಲಿ ವಿವರಿಸಿದ್ದಾರೆ:

> ನೀವು ಲೋಕಕ್ಕೆ ಬೆಳಕಾಗಿದ್ದೀರಿ. ಗುಡ್ಡದ ಮೇಲೆ ಕಟ್ಟಿರುವ ಊರು ಮರೆಯಾಗಿರ ಲಾರದು; ಮತ್ತು ದೀಪವನ್ನು ಹತ್ತಿಸಿ ಕೊಳಗದೊಳಗೆ ಇಡುವದಿಲ್ಲ; ದೀಪಸ್ತಂಭದ ಮೇಲೆ ಇಡುತ್ತಾರಷ್ಟೆ. ಆಗ ಅದು ಮನೆಯಲ್ಲಿರುವವರೆಲ್ಲರಿಗೆ ಬೆಳಕು ಕೊಡುವದು. ಅದರಂತೆ ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ. ಹೀಗಾದರೆ ಅವರು ನಿಮ್ಮ ಒಳ್ಳೇ ಕ್ರಿಯೆಗಳನ್ನು ನೋಡಿ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡುವರು (ಮತ್ತಾಯ 5:14-16).

ತಪ್ಪಿಸಿಕೊಳ್ಳಬೇಕಾದ ನಕಾರಾತ್ಮಕ ಗುಣಗಳನ್ನೂ ಬೆಳಸಿಕೊಳ್ಳ ಬೇಕಾದ ಸಕಾರಾತ್ಮಕ ಗುಣಗಳನ್ನೂ ಗಲಾತ್ಯ 5ರಲ್ಲಿ ಪೌಲನು ಯಾದಿ ಮಾಡಿದ್ದಾನೆ:

> ಶರೀರಭಾವದ ಕರ್ಮಗಳು ಪ್ರಸಿದ್ಧವಾಗಿಯೇ ಅವೆ; ಯಾವವೆಂದರೆ - ಜಾರತ್ವ, ಬಂಡುತನ, ನಾಚಿಕೆಗೇಡಿತನ, ವಿಗ್ರಹಾರಾಧನೆ, ಮಾಟ ಹಗೆತನ, ಜಗಳ, ಹೊಟ್ಟೇಕಿಚ್ಚು, ಸಿಟ್ಟು, ಕಕ್ಷಭೇದ, ಭಿನ್ನಮತ, ಮತ್ಸರ, ಕುಡಿಕತನ, ದುಂದೌತಣ ಇಂಥವುಗಳೇ. ಇವುಗಳ ವಿಷಯದಲ್ಲಿ - ಇಂಥ ಕಾರ್ಯಗಳನ್ನು ನಡಿಸುವವರು ದೇವರ ರಾಜ್ಯಕ್ಕೆ ಬಾಧ್ಯರಾಗುವದಿಲ್ಲವೆಂದು ನಾನು ಹಿಂದೆ ಹೇಳಿದಂತೆಯೇ ಈಗಲೂ ನಿಮ್ಮನ್ನು ಎಚ್ಚರಿಸುತ್ತೇನೆ. ಆದರೆ ದೇವರಾತ್ಮನಿಂದ ಉಂಟಾಗುವ

ಫಲವೇನಂದರೆ - ಪ್ರೀತಿ, ಸಂತೋಷ, ಸಮಾಧಾನ, ದೀರ್ಘಶಾಂತ, ದಯೆ, ಉಪಕಾರ, ನಂಬಿಕೆ, ಸಾಧುತ್ವ, ಶಮೆದಮೆ ಇಂಥವುಗಳೇ. ಇಂಥವುಗಳನ್ನು ಯಾವ ಧರ್ಮಶಾಸ್ತ್ರವೂ ಆಕ್ಷೇಪಿಸುವದಿಲ್ಲ (ಗಲಾತ್ಯ 5:19-23).

ಇದರ ಅರ್ಥ ನೀವು ಪರಿಪೂರ್ಣ ಜೀವನ ನಡಿಸತಕ್ಕದ್ದು ಎಂದಾಗುತ್ತದೋ? ಇಲ್ಲ, ಎಂದಾದರೂ ಪರಿಪೂರ್ಣ ಜೀವಿತ ಜೀವಿಸಿದಾತನು ಒಬ್ಬನೇ - ಆತನು ಯೇಸುವು. ನೀವು ಯೇಸುವಿನಂತಿರಲು ಪ್ರಯತ್ನಿಸ ಬೇಕೆಂಬುದೇ ಇದರ ಅರ್ಥ. ನಿಮಗೆ ಸಾಧ್ಯವಾದಷ್ಟು ನೀವು ಅತ್ಯುತ್ತಮವಾಗಿರಬೇಕು. "ನೀನು ದೇವರ ದೃಷ್ಟಿಗೆ ಯೋಗ್ಯನಾಗಿ ಕಾಣಿಸಿಕೊಳ್ಳುವದಕ್ಕೆ *ಪ್ರಯಾಸಪಡು*" (2 ತಿಮೊಥೆ 2:15)[1] ಎಂದು ಪೌಲನು ಆಜ್ಞಾಪಿಸಿದ್ದಾನೆ. "ನಿನ್ನನ್ನು ದೇವರಿಗೆ ಮೆಚ್ಚಿಗೆಯಾದವನಾಗಿ ಸಮರ್ಪಿಸಲು *ಆಸಕ್ತನಾಗಿರು*"[2] ಎಂದು NIV ಯಲ್ಲಿದೆ. ದೇವರು "ತನ್ನನ್ನು ಹುಡುಕುವವರಿಗೆ ಪ್ರತಿಫಲ ವನ್ನು ಕೊಡುತ್ತಾನೆ" (ಇಬ್ರಿಯ 11:6; KJV)[3] ಎಂದು ಓದುತ್ತೇವೆ - "ಪರಿಪೂರ್ಣ ವಾಗಿ ಆತನನ್ನು ಹುಡುಕುವುದು" ಅಲ್ಲ, ಆದರೆ "ಆಸಕ್ತಿಯಿಂದ ಆತನನ್ನು ಹುಡುಕು ವುದು."

## ವಾಸ್ತವಿಕತೆ

ಕೆಲವು ಸಮಯಗಳಲ್ಲಿ ದೇವರ ಅನುಯಾಯಿಗಳೂ ಸಹ ತಾವು ಜೀವಿಸ ಬೇಕಾದ ರೀತಿಯಲ್ಲಿ ಜೀವಿಸದೇ ಇರುವುದು ದುರದೃಷ್ಟದ ಸಂಗತಿ. ಅವರೇನಾಗಿರ ಬೇಕೋ ಅದಾಗಿ ಅವರು ಯಾವಾಗಲೂ ಇರುವದಿಲ್ಲ. ದೇವರ ಜನರು ಪಾಪ ಮಾಡಿದ ಉದಾಹರಣೆಗಳಿಂದ ಬೈಬಲ್ ತುಂಬಿರುತ್ತದೆ - ಅರಸ ದಾವೀದನು ವ್ಯಭಿಚಾರ ಮಾಡಿದನು (2 ಸಮೂವೇಲ 11). ಅಪೊಸ್ತಲ ಪೇತ್ರನು ತನ್ನ ಕರ್ತನನ್ನು ಅಲ್ಲಗಳೆದನು (ಮತ್ತಾಯ 26:69-75). "ನಾವು ಪಾಪ ಮಾಡಲಿಲ್ಲವೆಂದು ಹೇಳಿದರೆ ಆತನನ್ನು (ದೇವರನ್ನು) ಸುಳ್ಳುಗಾರನನ್ನಾಗಿ ಮಾಡುತ್ತೇವೆ ಮತ್ತು ಆತನ ವಾಕ್ಯವು ನಮ್ಮಲ್ಲಿ ಇಲ್ಲ" ಎಂದು ಯೋಹಾನನು ಕ್ರೈಸ್ತರಿಗೆ ಬರೆದನು (1 ಯೋಹಾನ 1:10). ಕ್ರೈಸ್ತನು ಪಾಪ ಮಾಡುವಾಗ ಏನು ಮಾಡಬೇಕು?

### ಮಾನಸಾಂತರ

ಅವನು ತನ್ನ ಪಾಪಗಳಿಗಾ ಈಗ ಮಾನಸಾಂತರಪಟ್ಟು ತನ್ನನ್ನು ಕ್ಷಮಿಸುವಂತೆ - ದೇವರನ್ನು ಕೇಳಿಕೊಳ್ಳಬೇಕು. ಸೀಮೋನನು ಪಾಪ ಮಾಡಿದಾಗ, "ಆದುದರಿಂದ ಈ ನಿನ್ನ ಕೆಟ್ಟತನವನ್ನು ಬಿಟ್ಟು ದೇವರ ಕಡೆಗೆ ತಿರುಗಿಕೊಂಡು ಕರ್ತನು ನಿನ್ನ ಮನಸ್ಸಿನ ಆಲೋಚನೆಯನ್ನು ಕ್ಷಮಿಸುವನೋ ಏನೋ ಆತನನ್ನು ಬೇಡಿಕೋ" (ಅಪೊಸ್ತಲರ ಕೃತ್ಯ 8:22) ಎಂದು ಪೇತ್ರನು ಹೇಳಿದನು. ನಿಜವಾದ ಮಾನಸಾಂತರವು ಮಾನವತೆ ಯಿಂದ ಸಾಧ್ಯವಾದಷ್ಟು ಹಿಂದಿನ ತಪ್ಪುಗಳನ್ನು ಸರಿಪಡಿಸುವದನ್ನು ಒಳಗೊಂಡಿದೆ.

### ಪಾಪದ ಅರಿಕೆ

ಮಾನಸಾಂತರದ ಅವಶ್ಯವಾದ ಭಾಗವು ಪಾಪವನ್ನು ಒಪ್ಪಿಕೊಳ್ಳಲು ಸಿದ್ಧ ನಾಗಿರುವುದು. ಕ್ರೈಸ್ತನು ಯಾವಾಗಲೂ ದೇವರಿಗೆ ತನ್ನ ಪಾಪಗಳನ್ನು ಅರಿಕೆ ಮಾಡುವ ಅಗತ್ಯತೆಯಿದೆ. "ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು

ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿ ಮಾಡುವನು'' (1 ಯೋಹಾನ 1:9) ಎಂದು ಯೋಹಾನನು ಹೇಳಿದ್ದಾನೆ. ಕೆಲವು ಸಲ ಅವರು ತಮ್ಮ ಪಾಪಗಳನ್ನು ಇತರರಿಗೆ, ವಿಶೇಷವಾಗಿ ಆ ಪಾಪಗಳು ಇತರರಿಗೆ ತಿಳಿದಿದ್ದರೆ ಇಲ್ಲವೇ ಅವು ಇತರರಿಗೆ ನೋವು ಕೊಟ್ಟಿದ್ದರೆ, ಅರಿಕೆ ಮಾಡುವ ಅಗತ್ಯತೆಯಿದೆ. ''ಹೀಗಿರಲು ನೀವು ಸ್ವಸ್ಥರಾಗ ಬೇಕಾದರೆ ನಿಮ್ಮ ಪಾಪಗಳನ್ನು ಒಬ್ಬರಿಗೊಬ್ಬರು ಅರಿಕೆ ಮಾಡಿ[4] ಒಬ್ಬರಿಗೋಸ್ಕರ ಒಬ್ಬರು ದೇವರನ್ನು ಪ್ರಾರ್ಥಿಸಿರಿ'' (ಯಾಕೋಬ 5:16ಎ) ಎಂದು ಯಾಕೋಬನು ಬರೆದಿದ್ದಾನೆ. ಸಾಮಾನ್ಯ ನಿಯಮವಾಗಿ ಪಾಪವು ಆದಷ್ಟು ಬಹಿರಂಗವಾಗಿ ಅರಿಕೆ ಮಾಡಲ್ಪಡುವ ಅವಶ್ಯಕತೆಯಿದೆ.

**ಪ್ರಾರ್ಥನೆ**

ಉಲ್ಲೇಖಿಸಲ್ಪಟ್ಟ ವಾಕ್ಯದಲ್ಲಿ ನೋಡಿದಂತೆ ಯಾವಾಗಲೂ ಪ್ರಾರ್ಥಿಸುತ್ತಾ ಇರತಕ್ಕದ್ದು. ಕ್ರೈಸ್ತರು ಪ್ರಾರ್ಥಿಸುವ ಅಗತ್ಯತೆಯಿದೆ (ಅಪೊಸ್ತಲರ ಕೃತ್ಯ 8:22). ಕೆಲವು ಸಲ ತಮಗಾಗಿ ಪ್ರಾರ್ಥಿಸಲು ಇತರರನ್ನು ಕೇಳುವ ಅಗತ್ಯತೆಯಿದೆ (ಯಾಕೋಬ 5:16).

## ಭರವಸೆ

ಬೈಬಲಿನಲ್ಲಿ ನನ್ನ ಮೆಚ್ಚಿಗೆಯ ವಾಕ್ಯಗಳಲ್ಲಿ 1 ಯೋಹಾನ 1:7 ಒಂದು. ಅದು ಹೀಗಿದೆ: ''ಆತನು ಬೆಳಕಿನಲ್ಲಿರುವಂತೆಯೇ ನಾವು ಬೆಳಕಿನಲ್ಲಿ ನಡೆದರೆ, ನಾವು ಒಬ್ಬರ ಸಂಗಡಲೊಬ್ಬರು ಅನ್ಯೋನ್ಯತೆಯಲ್ಲಿದ್ದೇವೆ; ಮತ್ತು ಆತನ ಕುಮಾರನಾದ ಯೇಸುವಿನ ರಕ್ತವು ನಮ್ಮನ್ನು ಸಕಲ ಪಾಪದಿಂದ ಶುದ್ಧಿ ಮಾಡುತ್ತದೆ.'' ವಚನವು ವರ್ತಮಾನ ಕಾಲವನ್ನು ಉಪಯೋಗಿಸುತ್ತದೆ. ಅದು ಗ್ರೀಕಿನಲ್ಲಿ ನಿರಂತರ ಕಾರ್ಯವನ್ನು ಸೂಚಿ ಸುತ್ತದೆ. ನಾನು ಬೆಳಕಿನಲ್ಲಿ ನಡೆಯುವದನ್ನು ಮುಂದುವರಿಸಿದರೆ, ಕ್ರಿಸ್ತನ ರಕ್ತವು ನನ್ನ ಪಾಪವನ್ನು ತೊಳೆಯುವದನ್ನು ಮುಂದುವರಿಸುತ್ತದೆ ಎಂದು ವಚನವು ಅಕ್ಷರಶಃವಾಗಿ ಹೇಳುತ್ತದೆ.

ಇದು ಉತ್ತೇಜನಕಾರಿಯಾದ ಸತ್ಯವಾಗಿದೆ. ಒಬ್ಬನು ಬಾಪ್ತಿಸ್ಮದ ನೀರಿನಿಂದ ಹೊರಗೆ ಬರುವಾಗ ಅವನ ಎಲ್ಲಾ ಪಾಪಗಳು ಯೇಸುವಿನ ರಕ್ತದಿಂದ (ಪ್ರಕಟನೆ 1:5) ತೊಳೆಯಲ್ಪಟ್ಟಿರುತ್ತವೆ (ಅಪೊಸ್ತಲರ ಕೃತ್ಯ 22:16). ಆಗ, ಅವನು ''ಬೆಳಕಿ ನಲ್ಲಿ ನಡೆಯುವಾಗ'' ಯೇಸುವಿನ ರಕ್ತವು ಅವನ ಪಾಪಗಳನ್ನು ತೊಳೆಯುವದನ್ನು ಮುಂದುವರಿಸುವುದು.

''ಬೆಳಕಿನಲ್ಲಿ ನಡೆಯುವುದು'' ಎಂಬುದರ ಅರ್ಥವೇನು? ''ಬೆಳಕಿನಲ್ಲಿ ನಡೆಯು ವುದು'' ಅಂದರೆ ದೇವರು ತನ್ನ ಮಕ್ಕಳು ಜೀವಿಸಲು ಬಯಸುವಂತೆ ಜೀವಿಸುವುದು.[5] ಸಭೆಯ ಸದಸ್ಯರು ಪರಿಪೂರ್ಣವಾಗಿ ಜೀವಿಸುವರು ಎಂಬುದು ಇದರ ಅರ್ಥವಲ್ಲ. ಯಾಕಂದರೆ ಆಗ ಶುದ್ಧೀಕರಿಸಲು ಅವರಲ್ಲಿ ಪಾಪಗಳೇ ಇರುವದಿಲ್ಲ. ''ನಡೆ'' ಎಂಬುದು ಮೂಲ ಪದ. ಕ್ರೈಸ್ತನ ನಡೆಯು ಅವನ ಜೀವನದ ಶೈಲಿಯಾಗಿರುವುದು. ರಕ್ಷಿಸಲ್ಪಡಲು ಬಯಸುವವನಿಗೆ ಕ್ರೈಸ್ತ ಜೀವನ ಶೈಲಿಯಿರತಕ್ಕದ್ದು.

ಬೆಳಕಿನಲ್ಲಿ ನಡೆಯುತ್ತಿರುವವನು ಪರಿಪೂರ್ಣನಾಗಿರುವದಿಲ್ಲ. ಆದರೆ ಅವನ ಹೃದಯವು ದೇವರ ಮೇಲೆ ಕೇಂದ್ರೀಕರಿಸಿರುವುದು. ಆತನ ಚಿತ್ತವನ್ನು ಮಾಡಲಿಕ್ಕೆ

ಅವನು ಒಪ್ಪಿಕೊಳ್ಳುವನು. ಕ್ರೈಸ್ತ ಮಾರ್ಗದ ಮೇಲೆ ಅವನು ಎಡವಿ ಬೀಳಬಹುದು; ಆದರೆ ಅವನು ಹಾಗೆ ಬೀಳುವಾಗ ಮಾನಸಾಂತರಪಡುವನು, ಅರಿಕೆ ಮಾಡುವನು ಮತ್ತು ಪ್ರಾರ್ಥನೆ ಮಾಡುವನು. ಆಗ ಅವನು ತನ್ನನ್ನು ಸುಧಾರಿಸಿಕೊಂಡು ದೇವರೊಂದಿಗಿನ ತನ್ನ ಪ್ರಯಾಣ ಮುಂದರಿಸುವನು.

## ವಾಗ್ದಾನ

ಯಾರೂ ಕ್ರೈಸ್ತ ಜೀವಿತವನ್ನು ತನ್ನಷ್ಟಕ್ಕೆ ತಾನೇ ಜೀವಿಸಲಾರನು. ಆದರೆ ದೇವರು ಸಹಾಯ ಮಾಡಲು ವಾಗ್ದಾನ ಮಾಡಿದ್ದಾನೆ (ಅಪೊಸ್ತಲರ ಕೃತ್ಯ 2:38; ರೋಮಾಪುರ 8:13, 26). ಕರ್ತನನ್ನು ಅವಲಂಭಿಸುವವನಿಗೆ ಈ ವಾಗ್ದಾನವಿದೆ:

> ಚಿಕ್ಕ ಮಕ್ಕಳೇ, ನೀವಂತೂ ದೇವರಿಂದ ಹುಟ್ಟಿದವರಾಗಿದ್ದೀರಿ; ಮತ್ತು ಲೋಕದಲ್ಲಿರುವವನಿಗಿಂತ ನಿಮ್ಮಲ್ಲಿರುವಾತನು ಹೆಚ್ಚಿನವನಾಗಿರುವನು ... (1 ಯೋಹಾನ 4:4).
>
> ಯಾಕಂದರೆ ದೇವರಿಂದ ಹುಟ್ಟಿರುವಂಥದೆಲ್ಲವು ಲೋಕವನ್ನು ಜಯಿಸುತ್ತದೆ. ಲೋಕವನ್ನು ಜಯಿಸುವಂಥದು ನಮ್ಮ ನಂಬಿಕೆಯೇ (1 ಯೋಹಾನ 5:4).

ಯೇಸುವು ಈ ಆಹ್ವಾನವನ್ನೂ ವಾಗ್ದಾನವನ್ನೂ ಕೊಟ್ಟಿದ್ದಾನೆ: "ನೀನು ಸಾಯ ಬೇಕಾದರೂ ನಂಬಿಗಸ್ತನಾಗಿರು; ನಾನು ನಿನಗೆ ಜೀವವೆಂಬ ಜಯಮಾಲೆಯನ್ನು ಕೊಡುವೆನು" (ಪ್ರಕಟನೆ 2:10ಬಿ). ಇಲ್ಲಿ ಹೇಳಲ್ಪಟ್ಟ "ಮಾಲೆ"ಯು ಜಯದ ಮಾಲೆ ಯಾಗಿದೆ. "ಜೀವನ ಜಯ ಮಾಲೆಯು" ಜೀವನ, ನಿತ್ಯಜೀವದ ಮಾಲೆಯನ್ನು ಒಳಗೊಂಡಿದೆ.

ನಮ್ಮ ಅಧ್ಯಯನದ ಪೀಠಿಕೆಯಲ್ಲಿ ನಮ್ಮ ಉದ್ದೇಶವನ್ನು ಹೀಗೆ ಹೇಳಿದ್ದೇವೆ:

**ಗುರಿ: ನಿತ್ಯಜೀವ**

ಮರಣದವರೆಗೆ ನಾವು ಆತನಿಗೆ ನಂಬಿಗಸ್ಥನಾಗಿದ್ದರೆ ನಮಗೆ ನಿತ್ಯಜೀವ ಕೊಡುವೆನೆಂದು ಯೇಸು ವಾಗ್ದಾನ ಮಾಡಿದ್ದಾನೆ. ಹೀಗೆ ನಮ್ಮ ಗುರಿಯನ್ನು ತಲುಪುವೆವು.

## ಮುಕ್ತಾಯ

ನಾವು ನಮ್ಮ ಅಧ್ಯಯನದ ಅಂತ್ಯಕ್ಕೆ ಸಮೀಪಿಸಿದ್ದೇವೆ. ವೈಯಕ್ತಿಕ ಅನ್ವಯ ಮಾಡಿಕೊಳ್ಳಲು ಈಗ ಸಮಯ ಬಂದಿದೆ. ನಿಮಗೆ ನಿತ್ಯಜೀವ ಬೇಕೋ? ಕರ್ತನಿಗೆ ನಿಮ್ಮ ಜೀವಿತವನ್ನು ಸಮರ್ಪಿಸಲು ಸಾಕಾಗುವಷ್ಟು ಅದು ಬೇಕೋ? ಮರಣದವರೆಗಿನ ಒಪ್ಪಿಸಿಕೊಡುವಿಕೆಯನ್ನು ಮಾಡಲು ನೀವು ಸಿದ್ಧರಾಗಿರುವಿರೋ?

ಟಿಪ್ಪಣಿಗಳು

[1]ಸ್ಪಷ್ಟತೆಯು ನನ್ನದು. "ಪರಿಶ್ರಮಪಡು" ಎಂಬುದರ ಬದಲು KJVಯಲ್ಲಿ "ಅಭ್ಯಾಸಪಡು" ಎಂದಿದೆ. ಬಹಳ ದಿನದ ಹಿಂದೆ "ಅಭ್ಯಾಸ ಮಾಡು" ಎಂಬ ಪದವು ಈ ಅರ್ಥದಲ್ಲಿ ಉಪಯೋಗಿಸಲ್ಪಡ ಬಹುದಿತ್ತು: "ಪ್ರಯಾಸದಿಂದ ಪ್ರಯತ್ನಪಡು" ಇಲ್ಲವೇ "ನಿನಗೆ ಅತ್ಯುತ್ತಮವಾದದ್ದನ್ನು ಮಾಡು" ಎಂದು. [2]ಸ್ಪಷ್ಟತೆ ನನ್ನದು. [3]NASBಯಲ್ಲಿ "ಆತನನ್ನು ಹುಡುಕಿರಿ" ಎಂದಷ್ಟೇ ಇದೆ. ಆದರೆ "ಹುಡುಕಿರಿ" ಎಂದು ಭಾಷಾಂತರಿಸಲ್ಪಟ್ಟ ಗ್ರೀಕ ಪದವು ಅರ್ಧ ಹೃದಯದಿಂದ ಹುಡುಕುವುದು ಸಾಕಾಗುವದಿಲ್ಲ ಎಂಬುದನ್ನು ಸೂಚಿಸುತ್ತದೆ. ಅದು ಪರಿಶ್ರಮದ ಹುಡುಕುವಿಕೆಯಾಗಿರಬೇಕು. [4]"ಕನ್‌ಫೆಶನಲ್ ಬಾಕ್ಸನಲ್ಲಿ" ಯಾವುದೇ ಧಾರ್ಮಿಕ ಅಧಿಕಾರಿಯ ಮುಂದೆ ಅರಿಕೆ ಮಾಡುವದಕ್ಕೆ ಇದು ಸಂಬಂಧಿಸಿಲ್ಲ. ಇದು ಕ್ರೈಸ್ತರ ಮಧ್ಯದಲ್ಲಿಯ ಪರಸ್ಪರ ಅರಿಕೆಯಾಗಿದೆ. [5]"ದೇವರು ಬೆಳಕಾಗಿದ್ದಾನೆ" (1 ಯೋಹಾನ 1:5). ಆದುದರಿಂದ "ಬೆಳಕಿನಲ್ಲಿ ನಡೆಯುವದು" ದೇವರೊಂದಿಗೆ ನಡೆಯುವುದಾಗಿದೆ. ಯೇಸುವು "ಲೋಕಕ್ಕೆ ಬೆಳಕಾಗಿದ್ದಾನೆ" (ಯೋಹಾನ 8:12). ಆದುದರಿಂದ "ಬೆಳಕಿನಲ್ಲಿ ನಡೆಯುವುದು" ಯೇಸುವಿನೊಂದಿಗೆ ನಡೆಯುವುದಾಗಿದೆ. ದೇವರ ವಾಕ್ಯವು ಬೆಳಕನ್ನು ಕೊಡುತ್ತದೆ (ಕೀರ್ತನೆ 119:105). ಆದುದರಿಂದ "ಬೆಳಕಿನಲ್ಲಿ ನಡೆಯುವುದು" ಆತನ ವಾಕ್ಯದ ಪ್ರಕಾರ ನಡೆಯುವದಾಗಿದೆ.

© 2009 Truth for Today